ರವಾನೆಯಾಗುತ್ತದೆ. ಒಂದು ಸಲಗದ ಮರಿಯನ್ನು ಅದರ ತಾಯಿಯಿಂದ ಬೇರ್ಪಡಿಸಿ ಇನ್ನೂರು ಕಿಲೋ ಮೀಟರ್ ದೂರಕ್ಕೆ ಒಯ್ದು ವಿಜ್ಞಾನಿಗಳು ಇಟ್ಟಾಗ ಮರಿಯ ಕೂಗು ಆಲಿಸಿ ಆನೆ ಪಡೆಗಳು ಅಲ್ಲಿಯತನಕ ನಡೆದು ಹೋದ ಉದಾಹರಣೆಗಳಿವೆ. ಆನೆಗಳು ಪರಸ್ಪರ ಮಾತಾಡಿಕೊಳ್ಳುವ, ಅಷ್ಟು ದೂರದ ಸಂದೇಶವನ್ನು ಕೇಳಿಸಿಕೊಳ್ಳುವ ಸಂಗತಿ ದಿಗ್ಭ್ರಮೆ ಹುಟ್ಟಿಸುವ ವಿಷಯ ಹೌದಲ್ವೇ' ಎಂದರು. ನಾನು ಆನೆಗಳಿಗೆ ಇರುವ ಅಗಾಧ ಶ್ರವಣ ಶಕ್ತಿಯ ಕಥೆ ಕೇಳಿ ವಿಸ್ಮಯಗೊಂಡು 'ಅಷ್ಟು ಅಗಲದ ಕಿವಿ ನಿಸರ್ಗ ಅದಕ್ಕೆ ದಯಪಾಲಿಸಿರುವುದು ಸಾರ್ಥಕವಾಯಿತು ಬಿಡಿ ಸರ್' ಎಂದು ನಕ್ಕೆ. ಶಬ್ದ ಬಂದ ಕಡೆಗೆ ಕಿವಿಗಳನ್ನು ತಿರುಗಿಸಿ ಆಲಿಸುವ ಶಕ್ತಿ ಇರುವ ಪ್ರಾಣಿಗಳ ಸೌಲಭ್ಯ, ಕರಿಗಳಿಗಿರುವ ದೂರದ ಮಾತನ್ನು ಕೇಳುವ ಶಕ್ತಿ ಒಂದೊಮ್ಮೆ ಮನುಷ್ಯರಿಗೆ ಇದ್ದಿದ್ದರೆ ಭಾರಿ ಅನಾಹುತಗಳೇ ನಡೆದು ಹೋಗುತ್ತಿದ್ದವು! ಯಾರ ಬಗ್ಗೆ ಎಲ್ಲಿಯೂ ಯಾವ ಚಾಡಿ ಮಾತೂ ಆಡುವಂತಿರಲಿಲ್ಲ.

ಎಷ್ಟೋ ಸಲ ಆನೆಗಳು ಮಂಕುದಿಣ್ಣೆಯಂತೆ ಸುಮ್ಮನೆ ನಿಂತಿದ್ದಾವೆ ಎಂದು ನಾವು ಭಾವಿಸಿಕೊಳ್ಳುತ್ತೇವೆ. ಅದು ನಮ್ಮ ತಪ್ಪು ಕಲ್ಪನೆ. ಇದರ ಕಣ್ಣು ಕೂಡ ತುಂಬಾ ಸೂಕ್ಷ್ಮ. ಮನುಷ್ಯರ ಮತ್ತು ಸ್ಥಳದ ಗುರುತು ಛಾಪಿಸಿ ಇಟ್ಟುಕೊಳ್ಳುವಲ್ಲಿ ಇದರ ಕಣ್ಣು ಕ್ಯಾಮೆರಾದಂತೆ ಕೆಲಸ ಮಾಡುತ್ತದೆ. ಎಲ್ಲವನ್ನೂ ಗಮನಿಸಿ, ಗ್ರಹಿಸಿ, ಕ್ರೋಢೀಕರಿಸುವ ಬುದ್ಧಿಶಕ್ತಿಯಿರುವ ಗಜ ಸದಾ ಜಾಗರೂಕ ಸ್ಥಿತಿಯಲ್ಲೇ ಇರುತ್ತದೆ. ತಮ್ಮ ನಡುವಿನ ಮಾತುಕತೆಗೆ ಗಜಗಳು ಅಲ್ಟ್ರಾಸೋನಿಕ್ ತರಂಗಾಂತರಗಳನ್ನು ಬಳಸುತ್ತವೆ. ಈ ತರಂಗಾಂತರಗಳು ಕಡಿಮೆ ಡೆಸಿಬಲ್ನಲ್ಲಿ ಪ್ರವಹಿಸುವ ಕಾರಣ ನಮ್ಮ ಕಿವಿಗೆ ಈ ಶಬ್ದ ಎಂದಿಗೂ ಕೇಳಿಸುವುದಿಲ್ಲ. ನಮ್ಮ ಕಣ್ಣೆದುರೇ ಹಸ್ತಿಗಳು ಹಲವಾರು ಕಿಲೋಮೀಟರ್ ದೂರದ ತಮ್ಮ ಸಂಬಂಧಿಗಳ ಜೊತೆ ನಾವೆಂದೂ ಆಲಿಸಲಾಗದ ಒಂದು ಮೌನ ಮಾತುಕತೆ ನಡೆಸುತ್ತಿರುತ್ತವೆ.

ಅಚ್ಚರಿ ಎಂದರೆ ಇಡೀ ಭೂಮಂಡಲದಲ್ಲೇ ಅತ್ಯಂತ ದೊಡ್ಡ ಮಿದುಳನ್ನು ಹೊಂದಿರುವ ಏಕೈಕ ಪ್ರಾಣಿ ಆನೆ. ಈ ಮಿದುಳು ಸುಮಾರು ಐದು ಕೆ.ಜಿ ತೂಕವಿರುತ್ತದೆ. ಮಿದುಳಿನ ರಚನೆ ಮತ್ತು ಕಾರ್ಯಶೈಲಿ ಮನುಷ್ಯನ ಮಸ್ತಿಷ್ಕಕ್ಕೆ ಹತ್ತಿರದಲ್ಲಿದ್ದು ಅತ್ಯಂತ ತೀಕ್ಷ್ಣವಾಗಿ ಕೆಲಸ ಮಾಡುತ್ತದೆ. ಅಸಾಧಾರಣ ಸ್ಮರಣೆ, ಆಳವಾದ ಭಾವನಾತ್ಮಕ ಸಂಬಂಧಗಳನ್ನು ನಿಭಾಯಿಸಬಲ್ಲ ಗಜನಿಗೆ ಸಹಾನುಭೂತಿ ಹೆಚ್ಚು. ಯಾವುದೇ ತನ್ನ ಒಡನಾಡಿಗೆ ತೊಂದರೆಯಾದರೂ ಧಾವಿಸಿ ಬಂದು ನೆರವು ನೀಡುವ, ಜೀವದ ಹಂಗು ತೊರೆದು ಕಾಪಾಡುವ ವಿಶಾಲ ಗುಣ ಆನೆಗಿದೆ. ಉಪಕಾರ ಮಾಡಿದವರ ಮರೆಯದೆ ಸ್ಮರಿಸುವ ನೀಯತ್ತಿದೆ. ಆದರೆ, ಮದವೇರಿದಾಗ ಮಾತ್ರ ಯಾವ ಸಂಬಂಧಗಳೂ ನೆನಪಿರುವುದಿಲ್ಲ. ಸಲಹಿದವರನ್ನೂ ಕೊಂದು ಎಸೆದ ಅನೇಕ ಉದಾಹರಣೆಗಳಿವೆ. ಗಜದ ದೇಹದಲ್ಲಾಗುವ ಹಾರ್ಮೋನುಗಳ ಬದಲಾವಣೆ ಮತ್ತು ಆ ಸಂದರ್ಭದಲ್ಲಿ ಅದರ ಬುದ್ಧಿಶಕ್ತಿ ಕೆಲಸ ಮಾಡುವ ರೀತಿಯ ಮೇಲೆಯೇ ಎಲ್ಲವೂ ನಿರ್ಣಯವಾಗಿರುತ್ತದೆ.

ಕುಂಜರ ತನ್ನ ಸೊಂಡಿಲನ್ನು ಸ್ಟೆತೋಸ್ಕೋಪ್‌ನಂತೆ ಬಳಸಬಲ್ಲದು. ಅನೇಕ ಸೂಕ್ಷ್ಮ ಸಂಗತಿಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಈ ಸೊಂಡಿಲಿಗಿದೆ. ಸೊಂಡಿಲು ಆನೆಗೆ ಒಂದರ್ಥದಲ್ಲಿ ಹೆಚ್ಚುವರಿ ನಾಲಗೆ, ಕಣ್ಣು, ಕಿವಿ ಇದ್ದಂತೆ. ಮಿದುಳಿಗೆ ಥಟ್ಟನೆ ಸಂದೇಶಗಳನ್ನು ತಲುಪಿಸುತ್ತದೆ. ಸೊಂಡಿಲ ಗ್ರಹಣ ಶಕ್ತಿ ಪ್ರಬಲವಾದದ್ದು. ಒಣಗಿದ ಕೆರೆ, ಬತ್ತಿದ ನದಿ ಅಡಿಯಲ್ಲಿರುವ ನೀರಸೆಲೆ ಪತ್ತೆ ಹಚ್ಚಿ ಹೇಳುವ ಸಾಮರ್ಥ್ಯ ಇರುವುದು ಕೂಡ ಈ ಸೊಂಡಿಲಿಗೆ. ಅನೇಕ ಸಲ ಕೊಂಬೆ ಮುರಿದುಕೊಂಡು ಬೆನ್ನು ಕೆರೆದುಕೊಳ್ಳಲೂ ಸಹ ಗಜ ತನ್ನ ಸೊಂಡಿಲನ್ನು ಕೈಯಂತೆ ಬಳಸುತ್ತದೆ. ಹೀಗೆ ಪ್ರತಿ ಪ್ರಾಣಿಗೂ ನಿಸರ್ಗ ಕರುಣಿಸಿರುವ ವಿಶೇಷ ಶಕ್ತಿ, ಸಾಮರ್ಥ್ಯಗಳನ್ನು ಅರ್ಥ ಮಾಡಿಕೊಳ್ಳುತ್ತಾ ಹೊರಟರೆ ನಮ್ಮ ಹುಂಬು ಲೆಕ್ಕಾಚಾರಗಳೆಲ್ಲಾ ತಲೆಕೆಳಗಾಗುತ್ತವೆ.

ಹೆಣ್ಣಾನೆ ತನ್ನ ಕುಟುಂಬದೊಡನೆ ಇಡೀ ಜೀವಮಾನ ಕಳೆಯುತ್ತಾಳೆ. ಇಲ್ಲಿ ಈಕೆಯೇ ಮನೆಯೊಡತಿ. ಆಕೆಯ ನಿರ್ದೇಶನವೇ ಅಂತಿಮ. ತನ್ನ ಗಂಡು ಮರಿಗಳು ಕಿರು ಪ್ರಾಯಕ್ಕೆ ಬಂದ ತಕ್ಷಣವೇ ಒದ್ದು ಹಿಂಡಿನಿಂದ ಆಚೆ ಹಾಕಿ ಹೆಣ್ಣುಮಕ್ಕಳನ್ನು ಮಾತ್ರ ಜೋಪಾನ ಮಾಡುತ್ತಾಳೆ.